**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019

ಪಿಡಬ್ಲು :9 ಸಿಡಬ್ಲು :12

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಪ್ರವೀಣ ಕುರಾಡೆ |
| ತಂದೆಯ ಹೆಸರು | : ಶ್ರೀ.ಶ್ರೀಮಂತ |
| ವಯಸ್ಸು | : 32 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ್ತವ್ಯ | : ಮುಗಳಖೋಡ |
| ದಿನಾಂಕ | : 10-12-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಆರೋಪಿತರು ಮುಗಳಖೋಡ ಗ್ರಾಮದ 5 ನೇ ನಂಬರ ವಾರ್ಡನಲ್ಲಿ ವಾಸ ಇರುತ್ತಾರೆ. ನಾನು ವಾರ್ಡ್ ನಂಬರ 3 ರಲ್ಲಿ ವಾಸ ಇದ್ದೇನೆ. ಚಾಸಾಃ 1, ಚಾಸಾಃ 6 ರಿಂದ ಚಾಸಾಃ 11 ರವರು ಗೊತ್ತಿರುತ್ತಾರೆ. ಚಾಸಾಃ 13 ನನ್ನ ಚಿಕ್ಕಪ್ಪ, ಚಾಸಾಃ 14 ನನ್ನ ಪರಿಚಯದವರು. ಚಾಸಾಃ 15 ನನ್ನ ಚಿಕ್ಕಪ್ಪನ ಮಗ. ಚಾಸಾಃ 16 ರಿಂದ ಚಾಸಾಃ 22 ಗೊತ್ತಿಲ್ಲ. ಚಾಸಾಃ 23 ಪ್ರಕಾಶ ಕಡಕೋಳ ಗೊತ್ತಿರುತ್ತಾರೆ. ಚಾಸಾಃ 24 ಗೊತ್ತಿಲ್ಲ.

2. ಆರೋಪಿತರು ವಾಸವಾಗಿರುವ ಮನೆಯ ಮುಂದೆ ಇರುವ ಜಾಗ ಮೊದಲಿಗೆ ಬಾಬನ್ನ ಅವರ ಕುಟುಂಬಕ್ಕೆ ಸೇರಿದ್ದು, ಅವರಿಂದ ಚಾಸಾಃ 13 ರಾಮಚಂದ್ರ ಕುರಾಡೆ ಅವರು ಖರೀದಿಗೆ ತೆಗೆದುಕೊಂಡಿದ್ದಾರೆ. ಈಗ 9 ವರ್ಷಗಳ ಹಿಂದೆ ವಿವಾದಿತ ಸ್ಥಳವನ್ನು ಸ್ವಚ್ಛಗೊಳಿಸಲು ಚಾಸಾಃ 14 ಮತ್ತು ಚಾಸಾಃ 15 ರವರವನ್ನು ಚಾಸಾಃ 1 ರವರು ಕರೆಸಿದ್ದರು. ಚಾಸಾಃ 1 ರವರು ಅವರಿಗೆ ಸೇರಿದ ಸ್ಥಳದಲ್ಲಿ ಕಟ್ಟಡ ಕಟ್ಟಲು ಪೂಜೆ ಮಾಡುತ್ತಿದ್ದರು. ಪೂಜೆ

ಮಾಡುತ್ತಿದ್ದ ಸ್ಥಳದಲ್ಲಿ ಚಾಸಾಃ 23 ರವರು ಮದ್ಯಪಾನ ಮಾಡಿದ ನಶೆಯಲ್ಲಿ ಜಾರಿ ಬಿದ್ದರು. ನಾನು ನಮ್ಮ ತೋಟದಿಂದ ಊರಿನ ಕಡೆಗೆ ಹೋಗುವಾಗ ಅಲ್ಲಿ ನಿಂತು ನೋಡಿದ್ದೇನೆ. ಕೆಳಗೆ ಬಿದ್ದ ಪ್ರಕಾಶ ಕಡಕೋಳ ಅವರನ್ನು ಎಬ್ಬಿಸಲು ಚಾಸಾಃ 10 ಅಜಿತ, ಚಾಸಾಃ 7 ಅರಿಹಂತ, ಚಾಸಾಃ 8 ಪೊನ್ನಂಜಿ, ಚಾಸಾಃ 6 ಶ್ರೀಕಾಂತ ಬಾಬನ್ನವರ ಮತ್ತು ರಾವುಸಾಬ ಎನ್ನುವವರು ಹೋಗಿದ್ದರು. ಆರೋಪಿತರು ಅದು ನಮ್ಮ ಜಾಗ ಇದೆ ಎಂದು ಹೇಳಿಕೊಂಡು ಕಬ್ಬಿಣದ ರಾಡ್, ಕಲ್ಲುಗಳಿಂದ ಚಾಸಾಃ 6 ಶ್ರೀಕಾಂತ ಇವರಿಗೆ ಕಬ್ಬಿಣದ ರಾಡ್‌ನಿಂದ ಕಾಲಿಗೆ ಹೊಡೆದರು. ಚಾಸಾಃ 8 ಪೊನ್ನಂಜಿ ಅವರಿಗೆ ಕಲ್ಲಿನಿಂದ ಕಣ್ಣಿಗೆ ಹೊಡೆದರು. ಅರಿಹಂತ ಮತ್ತು ನೇಮಿನಾಥ ಅವರಿಗೂ ಸಹ ಗಾಯಗಳು ಆಗಿದ್ದವು. ಗಾಯಗೊಂಡವರನ್ನು ನಾನು ಕಾರಿನಲ್ಲಿ ಕರೆದುಕೊಂಡು ನಾರಗೊಂಡ ಆಸ್ಪತ್ರೆಗೆ ಸೇರಿಸಿದ್ದೇನೆ.

3. ಚಾಸಾಃ 14 ಮಿಲನ ದೇವನ್ನವರ ಮತ್ತು ಚಾಸಾಃ 15 ಮಲ್ಲು ಕುರಾಡೆ ಅವರಿಗೂ ಸಹ ಗಲಾಟೆಯಲ್ಲಿ ಗಾಯಗಳಾಗಿದ್ದವು. ಬಾಬನ್ನವರ ಕುಟುಂಬ ಮತ್ತು ಆರೋಪಿತರ ಕುಟುಂಬವನ್ನು ಹೊರತುಪಡಿಸಿ ಸ್ಥಳದಲ್ಲಿ ಬೇರೆ ಯಾರೂ ಇರಲಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿರುವುದಿಲ್ಲ.

4. ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಕಬ್ಬಿಣದ ರಾಡ್ ಮತ್ತು ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಕಬ್ಬಿಣದ ರಾಡ್ ಗಳನ್ನು ಮತ್ತು ಕಲ್ಲುಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ಮು.ಮಾ.2, ಮು.ಮಾ.3 ಮತ್ತು ಮು.ಮಾ.4 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 27-08-2017 ರಂದು ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ " ಅಲ್ಲಿ ಪೂಜೆಗೆ ಅವರ ಸಂಬಂಧಿಕರಾದ ಬಾಹುಬಲಿ ಹುಲ್ಲೋಳ್ಳಿ ಮತ್ತು ಅವರ ಸಂಬಂಧಿಕರಿಗೆ ಕರೆಸಿದ್ದು, ನಾನೂ ಕೂಡ ಅಲ್ಲಿ ಪೂಜೆಗೆ ಹೋಗಿದ್ದೇನು." ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. " ನಮ್ಮೂರ ಪುರಸಭೆಯ ಮುಖ್ಯಾಧಿಕಾರಿಗಳಿಗೆ ಮತ್ತು ಅಧ್ಯಕ್ಷರಿಗೆ ಕರೆದುಕೊಂಡು ಬಂದಿದ್ದರು ಇಲ್ಲಿ ನಮ್ಮ ಜಾಗೆ ಇರುತ್ತದೆ, ನಾವು ಕಟ್ಟಡ ಕಟ್ಟಲು ಬಿಡುವುದಿಲ್ಲ ಅಂತಾ ಅಂದಾಗ ಪುರಸಭೆಯ ಮುಖ್ಯಾಧಿಕಾರಿಗಳು ಈಗ ಕಟ್ಟಡ ಕಟ್ಟುವ ಕೆಲಸ ಮಾಡಬೇಡಿರಿ ನಿಲ್ಲಿಸಿರಿ ಅಂತಾ ಹೇಳುವಷ್ಟರಲ್ಲಿ " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-7 [ಎ]ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ಚಾಸಾಃ 23 ಪ್ರಕಾಶ ಕಡಕೋಳ ಇವರು ಮಧ್ಯಪಾನ ಮಾಡಿ ಬಂದಿದ್ದರು ಎಂದು ನಾನು ಪೋಲಿಸರಿಗೆ ಹೇಳಿದ್ದೇನೆ ಎನ್ನುವುದು ಸರಿ. ಚಾಸಾಃ 23 ಪ್ರಕಾಶ ಕಡಕೋಳ ಇವರು ಮಧ್ಯಪಾನ ಮಾಡಿದ ನಶೆಯಲ್ಲಿ ಜಾರಿ ಬಿದ್ದನು ಎಂದು ನಾನುಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

2. ಈ ಪ್ರಕರಣದ 5, 6, 10 ರಿಂದ 12 ಮತ್ತು 14 ರಿಂದ 16 ನೇ ಆರೋಪಿತರೂ ಸಹ ಗಲಾಟೆ ನಡೆದ ಸ್ಥಳದಲ್ಲಿ ಇದ್ದರು ಎನ್ನುವುದು ಸರಿ. ಮು.ಮಾ.2, ಮು.ಮಾ.3 ಮತ್ತು

ಮು.ಮಾ.4 ನ್ನು ಕಟ್ಟಡ ಕಟ್ಟುವ ಸಲುವಾಗಿ ಬಾಬನ್ನವರ ಕುಟುಂಬದವರು ತಂದಿದ್ದರು ಎನ್ನುವುದು ಸರಿಯಲ್ಲ. ಕಟ್ಟಡ ಕಟ್ಟಲು ನಿರ್ಧರಿಸಿದ ಸ್ಥಳ 25 ಅಡಿ ಉದ್ದ ಮತ್ತು 20 ಅಡಿ ಅಗಲ ಇತ್ತು ಎನ್ನುವುದು ಸರಿ.

3. ಬಾಬನ್ನವರ ಕುಟುಂಬದವರು ಚಾಸಾಃ 13 ನಮ್ಮ ಚಿಕ್ಕಪ್ಪನಿಗೆ ಖಾಲಿ ಜಾಗವನ್ನು ಯಾವ ರೀತಿಯಲ್ಲಿ ಕೊಟ್ಟಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಆ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ. ಕಟ್ಟಡ ಕಟ್ಟಲು ನಿರ್ಧರಿಸಿದ ಸ್ಥಳದ ಸುತ್ತಮುತ್ತಲೂ ಮಾದರ ಸಮಾಜದವರು ವಾಸ ಮಾಡುತ್ತಾರೆ ಎನ್ನುವುದು ಸರಿ. ವಿವಾದಿತ ಸ್ಥಳದ ಸುತ್ತಮುತ್ತಲೂ ಬಾಬನ್ನವರ ಕುಟುಂಬ ಮತ್ತು ಕುರಾಡೆ ಕುಟುಂಬ ವಾಸ ಇಲ್ಲ ಎನ್ನುವುದು ಸರಿ.

4. ವಿವಾದಿತ ಸ್ಥಳದಿಂದ 2 ಕಿಲೋಮೀಟರ ದೂರದಲ್ಲಿ ಸರ್ಕಾರಿ ಆಸ್ಪತ್ರೆ ಇದ್ದು, ಅದರ ಅಕ್ಕಪಕ್ಕದಲ್ಲಿ ಕುರಾಡೆ ಕುಟುಂಬದವರು ವಾಸ ಇದ್ದು, ಅಲ್ಲಿಂದ 2 ಕಿಲೋಮೀಟರ ದೂರದಲ್ಲಿ ಬಾಬನ್ನವರ ಕುಟುಂಬದವರು ವಾಸ ಇದ್ದಾರೆ ಎನ್ನುವುದು ಸರಿ.

5. ನಾನು ಬಾಬನ್ನವರ ಕುಟುಂಬ ಮತ್ತು ಚಾಸಾಃ 13 ನನ್ನ ಚಿಕ್ಕಪ್ಪ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮು.ಮಾ.2, ಮು.ಮಾ.3 ಮತ್ತು ಮು.ಮಾ.4 ರಿಂದ ಆರೋಪಿತರು ಬಾಬನ್ನವರ ಕುಟುಂಬದವರನ್ನು ಹೊಡೆದಿಲ್ಲ ಎನ್ನುವುದು ಸರಿಯಲ್ಲ. ಬಾಬನ್ನವರ ಕುಟುಂಬದವರು ಮತ್ತು ನನ್ನ ಚಿಕ್ಕಪ್ಪ ಚಾಸಾಃ 13 ರವರು ಸೇರಿ ವಿವಾದಿತ ಸ್ಥಳದಿಂದ ಆರೋಪಿತರನ್ನು ಖಾಲಿ ಮಾಡಿಸಿ ತಾವು ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

6. ನಾನು ಮತ್ತು ಬಾಬನ್ನವರ ಕುಟುಂಬದವರು ಸೇರಿ ಆರೋಪಿತರ ಮೇಲೆ ಹಲ್ಲೆ ಮಾಡಿದ್ದೇವೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರಿಂದ**

5 ರಿಂದ 7, 10 ರಿಂದ 12 ಮತ್ತು 14 ರಿಂದ 16 ರವರು ಘಟನೆ ನಡೆದ ಸ್ಥಳದಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ.

1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರು ಮಾಡಿದ ಪಾಟೀ ಸವಾಲನ್ನು 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.